# ಸಿಕ್ಸರ್‌ಗಳ ಚಕ್ರವರ್ತಿ




ವೆಸ್ಟಿಂಡೀಸ್‌ನ ಈ ಸ್ಫೋಟಕ ಬ್ಯಾಟ್ಸ್‌ಮನ್ ಕ್ರಿಕೆಟ್ ಜಗತ್ತಿನ ದಂತಕಥೆಯಾಗುವತ್ತ ದಾಪುಗಾಲಿಡುತ್ತಿರುವುದು ಎಲ್ಲರ ಕಣ್ಣಿಗೂ ಸೋಜಿಗವೇ. ಕ್ರಿಕೆಟ್ ಬರಹಗಾರರಂತೂ ಈತನನ್ನು ಹೊಗಳಲು ಶಬ್ದಗಳು ಸಿಗದೆ ಪರದಾಡುತ್ತಿದ್ದಾರೆ. ಮಾತೆತ್ತಿದರೆ ಸಿಕ್ಸರ್, ತಪ್ಪಿದರೆ ಬೌಂಡರಿ. ವಿಕೆಟ್‌ಗಳ ನಡುವೆ ಸಿಂಗಲ್ ರನ್‌ಗೆ ಓಡುವುದೆಂದರೆ ಈತನಿಗೆ ತೀರಾ ಅಲರ್ಜಿ. 100 ರನ್ ಸಿಡಿಸಿದರೆ ಅದರಲ್ಲಿ ಸಿಂಗಲ್, ಡಬಲ್ ರನ್‌ಗಳ ಕೊಡುಗೆ ಹೆಚ್ಚೆಂದರೆ 20 ಮಾತ್ರ! ಉಳಿದದ್ದೆಲ್ಲ ಕ್ರೀಸ್‌ನಲ್ಲಿ ನಿಂತಲ್ಲೇ ಬಡಿದು ಬಂದ ಸಿಕ್ಸರ್, ಬೌಂಡರಿಗಳದ್ದು! ಟ್ವೆಂಟಿ:20 ಮತ್ತು ಏಕದಿನ ಕ್ರಿಕೆಟ್ ಜನಪ್ರಿಯವಾದ ಬಳಿಕವಂತೂ ಈ 6.4 ಅಡಿ ಎತ್ತರದ ದಾಂಡಿಗ ಕ್ರಿಕೆಟ್‌ನ ಅನಭಿಷಿಕ್ತ ದೊರೆಯೇ ಸರಿ. 120 ಮೀಟರ್ ಉದ್ದಕ್ಕೆ ಚಿಮ್ಮಿದ ಸಿಕ್ಸರ್‌ನಲ್ಲೂ ಈತನದ್ದೇ ದಾಖಲೆ. ಟೆಸ್ಟ್ ಪಂದ್ಯದ ಮೊದಲ ಚೆಂಡಿಗೆ ಸಿಕ್ಸರ್ ಹೊಡೆದದ್ದೂ ಈತನದ್ದೇ ದಾಖಲೆ. ಟ್ವೆಂಟಿ: 20 ಯಲ್ಲಿ ಅತ್ಯಧಿಕ 200 ಸಿಕ್ಸರ್‌ಗಳನ್ನು ಹೊಡೆದು ಮೊನ್ನೆ ಇನ್ನೊಂದು ದಾಖಲೆ ಬರೆದಿದ್ದಾನೆ. ಈ ದಾಖಲೆಯನ್ನು ಸದ್ಯಕ್ಕೆ ಅಳಿಸಿ ಹಾಕುವ ಯಾವ ಭೂಪರೂ ಕಾಣಿಸುತ್ತಿಲ್ಲ; ಯಾಕೆಂದರೆ ಈತನ ನಂತರದ ಅತ್ಯಧಿಕ ಟ್ವೆಂಟಿ:20 ಸಿಕ್ಸರ್‌ಗಳ ಸ್ಥಾನ ನಮ್ಮ ಸುರೇಶ್ ರೈನಾನದ್ದು– ಆದರೆ ಆತನ ಸಿಕ್ಸರುಗಳು ಸಂಖ್ಯೆ 134 ಅಷ್ಟೆ. ಏಕದಿನ ಪಂದ್ಯದ ಒಂದು ಓವರ್‌ನಲ್ಲಿ ಮೂರು ಸಿಕ್ಸರ್, ಎರಡು ಬೌಂಡರಿ ಮತ್ತು ಕೊನೆಗೊಂದು ಸಿಕ್ಸರ್– ಹೀಗೆ 32 ರನ್ ಗಳಿಸಿದ ವಿಶ್ವದಾಖಲೆಯೂ ಈತನದ್ದೇ. 2011ರಲ್ಲಿ ಐಪಿಎಲ್–4ರ ಪಂದ್ಯವೊಂದರಲ್ಲಿ ಈತ 55 ಎಸೆತಗಳಲ್ಲಿ 102 ರನ್ ಚಚ್ಚಿದ್ದನ್ನು ನೋಡಿ ಪ್ರೇಕ್ಷಕರು ಹುಚ್ಚೆದ್ದು ಕುಣಿದರು. ಎರಡೇ ವರ್ಷದ ಬಳಿಕ 49 ಎಸೆತಗಳಿಗೆ 107 ರನ್ ಹೊಡೆದು ಪ್ರೇಕ್ಷಕರನ್ನು ಮೂರ್ಛೆ ಬೀಳಿಸಿದ! ಎಲ್ಲಕ್ಕೆ ತಿಲಕವಿಟ್ಟಂತೆ 30 ಎಸೆತಗಳಲ್ಲಿ ಮತ್ತೊಂದು ಸೆಂಚುರಿ ಹೊಡೆದ. ಟ್ವೆಂಟಿ:20 ಪಂದ್ಯದಲ್ಲಿ ಎಲ್ಲ 20 ಓವರ್‌ಗಳನ್ನೂ ಕ್ರೀಸ್‌ನಲ್ಲಿ ನಿಂತು ಆಡಿದ ವಿಶ್ವದ ಏಕೈಕ ಬ್ಯಾಟ್ಸ್‌ಮನ್ ಈತ! ಈಗ ಹೇಗಾಗಿದೆಯೆಂದರೆ ಕ್ರಿಸ್ ಗೇಲ್ ಕ್ರೀಸಿಗೆ ಬಂದನೆಂದರೆ ಇಡೀ ಕ್ರೀಡಾಂಗಣ ತಂಡಭೇದವಿಲ್ಲದೆ ಭೋರ್ಗರೆಯುತ್ತದೆ. ಆತ ಔಟಾದನೆಂದರೆ ಇಡೀ ಕ್ರೀಡಾಂಗಣ ತಂಡಭೇದವಿಲ್ಲದೆ ಸ್ತಬ್ಧಗೊಳ್ಳುತ್ತದೆ! ಹೀಗೆ ಎಲ್ಲ ತಂಡಗಳ ಅಭಿಮಾನಿಗಳ ಕಣ್ಮಣಿಯಾಗುವುದೆಂದರೆ ಇನ್ನೊಬ್ಬರಿಗೆ ಅದು ಖಂಡಿತಾ ಅಸಾಧ್ಯದ ಮಾತೇ.

ಮೊದಲೆಲ್ಲ ಈತ ಅತಿಕ್ಷಿಪ್ರ ಅರ್ಧ ಶತಕಗಳಿಗಷ್ಟೇ ಲಾಯಕ್ಕು ಎಂದುಕೊಂಡವರಿದ್ದರು. ಆದರೆ ಟೆಸ್ಟ್ ಪಂದ್ಯದಲ್ಲೂ ಎರಡು ತ್ರಿಶತಕಗಳನ್ನು ಹೊಡೆದ! ಬ್ರಾಡ್ಮನ್, ಬ್ರಿಯಾನ್ ಲಾರಾ ಮತ್ತು ವೀರೇಂದ್ರ ಸೆಹ್ವಾಗ್ ಮಾತ್ರ ಈವರೆಗೆ ಮಾಡಿರುವ ಇಂತಹ ಸಾಧನೆಗೆ ಅತ್ಯಂತ ಕಡಿಮೆ ಅವಧಿಯಲ್ಲೇ ಗೇಲ್ ತನ್ನ ಹೆಸರನ್ನೂ ಸೇರಿಸಿಕೊಂಡ.

ಕಿಂಗ್‌ಸ್ಟನ್‌ನ ಕೊಳಚೆ ಪ್ರದೇಶದ ಬಳಿಯಲ್ಲೇ ಹುಟ್ಟಿ ಬೆಳೆದಾತ ಗೇಲ್. ಅಪ್ಪ ಪೊಲೀಸಾಗಿದ್ದರೆ, ಅಮ್ಮ ಕಳ್ಳೇಕಾಯಿ ಮಾರುತ್ತಿದ್ದಳು. 6 ಮಕ್ಕಳ ಸಂಸಾರದಲ್ಲಿ 5ನೆಯವನು. ಬಾಲ್ಯದಲ್ಲಿ ಹತ್ತು ಮನೆಗಳ ವಠಾರಕ್ಕೆ ಒಂದೇ ಸಂಡಾಸ ಇತ್ತು. ಇವತ್ತು ಕಿಂಗ್‌ಸ್ಟನ್‌ನಲ್ಲಿ ಈತನ ಬಂಗಲೆಯ ವೈಭೋಗ ನೋಡಿದರೆ, ಜಗತ್ತಿನ ಯಾವ ಕೋಟ್ಯಾಧಿಪತಿ ಉದ್ಯಮಿಗಳಿಗೂ ಕಡಿಮೆಯಿಲ್ಲ. ಬಂಗಲೆಯಲ್ಲಿ 4 ಗ್ಯಾರೇಜು, 9 ಬೆಡ್‌ರೂಮು, ಒಂದು ಪರ್ಸನಲ್ ಮಿನಿ ಥಿಯೇಟರ್, ಮಹಡಿಯಲ್ಲಿ ಈಜುಕೊಳ, ನಾಲ್ಕೈದು ಬಾರುಗಳು! ಕ್ರಿಕೆಟ್‌ನಿಂದಲೇ 250 ಲಕ್ಷ ಪೌಂಡ್ (ಸುಮಾರು 235 ಕೋಟಿ ರೂಪಾಯಿ) ದುಡ್ಡು ಗಳಿಸಿದ್ದಾನೆ. ವರ್ಷಕ್ಕೆ 50 ಲಕ್ಷ ಪೌಂಡ್ ಕ್ರಿಕೆಟ್ ಕ್ಲಬ್‌ಗಳ ಒಪ್ಪಂದದಿಂದಲೇ ಬರುತ್ತಿದೆ. ಜಾಹೀರಾತು ಆದಾಯಗಳ ಲೆಕ್ಕ ಬೇರೆ. ಟ್ವಿಟ್ಟರ್‌ನಲ್ಲಿ 17 ಲಕ್ಷ ಅಭಿಮಾನಿಗಳು ಈತನ ಪ್ರತಿಯೊಂದು ಹೊಡೆತಕ್ಕೂ ಅಕ್ಷರಗಳನ್ನು ಕುಣಿಸುತ್ತಾರೆ.

35ರ ಹರೆಯದ ಗೇಲ್ (ಬರ್ತ್‌ಡೇ 21/9/1979) ಕೀರ್ತಿಯ ಜತೆಗೇ ವಿವಾದಗಳನ್ನೂ ಬೆನ್ನಿಗೆ ಕಟ್ಟಿಕೊಂಡಿದ್ದಾನೆ. ಜೀವಮಾನವಿಡೀ ಕುಳಿತು ತಿಂದರೆ ಕರಗದಷ್ಟು ಆಸ್ತಿ ಮತ್ತು ಹದಿಹರೆಯದ ಹುಚ್ಚುಮನಸ್ಸು ಎರಡೂ ಇದ್ದರೆ ಅದು ಸಹಜವೇ. ಗೇಲ್ ಎಂದರೆ ಪಾರ್ಟಿ ಪ್ರಾಣಿ! ಕಿಂಗ್‌ಸ್ಟನ್‌ನಲ್ಲಿ ಈತನದೊಂದು ಭರ್ಜರಿ ಬಾರ್ ಇದೆ; ಅದರ ಹೆಸರು ಟ್ರಿಪಲ್‌ಸೆಂಚುರಿ ಸ್ಪೋರ್ಟ್ಸ್ ಬಾರ್. ಮೈತುಂಬ ಹಚ್ಚೆ ಹಾಕಿಸಿಕೊಂಡು, ತುಟಿಯಲ್ಲಿ ಸಿಗಾರ್ ಮತ್ತು ಕೈಯಲ್ಲಿ ಮದ್ಯದ ಬಾಟಲು ಎತ್ತಿಕೊಂಡು, ಈತ ಕುಣಿಯುತ್ತಿದ್ದರೆ ವಿಶ್ವಸುಂದರಿಯರೆಲ್ಲ ತೆಕ್ಕೆ ಬೀಳುತ್ತಾರೆ. ಒಮ್ಮೆ ಕ್ರಿಕೆಟ್ ಪ್ರವಾಸ ಹೋಗಿದ್ದಾಗ ಈತನ ಹೋಟೆಲ್ ಕೋಣೆಯಲ್ಲಿ ಇಬ್ಬರು ಸುಂದರಿಯರ ಜತೆಗೆ ಪಾರ್ಟಿ ಮಾಡುತ್ತಿದ್ದನಂತೆ. ಇನ್ನೊಮ್ಮೆ ಬಾಲಿವುಡ್ ನಟಿ ಶೆರ್ಲಿನ್ ಚೋಪ್ರಾ ಜತೆಗೆ ನೋಡಬಾರದ ಸ್ಥಿತಿಯಲ್ಲಿ ಕಂಡುಬಂದನಂತೆ. ಹೃದಯದ ನೋವಿಗೆ ಒಮ್ಮೆ ಶಸ್ತ್ರಚಿಕಿತ್ಸೆ ಆಗಿದೆ; ಬೆನ್ನುನೋವಿನ ಸೆಳೆತ ಹೆಚ್ಚಾಗಿದೆ. ಆದರೆ ಈತನ ಕುಡಿತ–ಕುಣಿತದ ಸೆಳೆತ ದೂರವಾಗಿಲ್ಲ; ಹಾಗೆಯೇ ಈತನಿಗಾಗಿ ಹುಚ್ಚೆದ್ದು ಕುಣಿವ ಪ್ರೇಕ್ಷಕರ ಸಂಖ್ಯೆಯೂ ಕಡಿಮೆಯಾಗಿಲ್ಲ. ಕೀರ್ತಿಗೆ ಶನಿ ಎನ್ನುವುದು ಇದಕ್ಕೇ ಇರಬಹುದೆ? ■

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65